ಶ್ರೀ ಕೆ. ಎಚ್. ಹನುಮೇಗೌಡ.—ಈ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಆಗ್ರಿಕಲ್ಚರ್ ಪ್ರುಡ್ಯೂಸ್ ಗಳನ್ನು ತಂದರೆ ಸಂಕವನ್ನು ವಸೂಲಿ ಮಾಡಬೇಕು ಎಂದು ಆರ್ಡರ್ ಇದೆ. ಆದರೆ ರೈತರು ಮಾರಾಟಕ್ಕೆ ತರತಕ್ಕ ದನ, ಕುರಿ, ಮತ್ತು ಆಡುಗಳ ಮೇಲೆ ಅವುಗಳನ್ನು ಆಗ್ರಿಕಲ್‌ಚರ್ ಪ್ರಾಡ್ಯೂಸ್ ಎಂದು ಗಣನೆಗೆ ತೆಗೆದುಕೊಂಡು ಸಂಕವನ್ನು ವಸೂಲಿ ಮಾಡುತ್ತಾರೆ ಇದು ಕಾನೂನು ಬದ್ಧವಾಗಿದೆಯೇ ತಿಳಿಸಿ ?

ಶ್ರೀ ಎ. ಶಂಕರ್ ಆಳ್ವ.—ಇದು ಕಾನೂನು ಬದ್ಧವಾಗಿದೆ.

ಶ್ರೀ ಟಿ. ಎಂ. ಮಂಜುನಾಥ.—ಈ ಮಾರ್ಕೆಟ್ ಕಮಿಟಿಯಂ ಅಧಿಕಾರಿಗಳು ಏನಾ ಇದ್ದಾರೆ.

ಅವರಿಗೆ ಯಾವುದೇ ಕಾಗದಪತ್ರಗಳು ಹೋಗಲಿ, ಉತ್ತರ ಬರುವುದಕ್ಕೆ ವರ್ಷಾನುಗಟ್ಟಲೆ ತಡವಾಗುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅಧಿಕಾರಿಗಳಿಗೆತಕ್ಕ ಆದೇಶ ಕೊಡುತ್ತೀರಾ ?

ಶ್ರೀ ಎ. ಶಂಕರ್ ಆಳ್ವ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ, ಬಂದರೆ ತಕ್ಕ ಆದೇಶವನಂ ಕೊಡುತ್ತೇವೆ.

ಶ್ರೀ ಎಂ ನಂಜೇಗೌಡ.—ಮಾರ್ಕೆಟ್‌ಗಳಲ್ಲಿ ವ್ಯಾಪಾರವನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕ ಎಂದು ಇದೆ. ಆದರೆ ಹಿಂದೆ ಸಂತೆಯಲ್ಲಿ ಯಾವರೀತಿ ಮಾರಾಟವಾಗುತ್ತಿತ್ತೋ ಆದೇರೀತಿಯಲ್ಲಿಯೇ ಈಗಲೂ ಮಂದುವರಿಸಿಕೊಂಡು ಬಂದಿದ್ದಾರೆ ಕಾನೂನು ಚೌಕಟ್ಟಿನಲ್ಲಿ ವ್ಯವಹಾರ ಮಾಡುವ ಹಾಗೆ ಆದೇಶ ಕೊಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಆ ರೀತಿ ನನ್ನ ತಿಳಿವಳಿಕೆ ಬಂದರೆ ಆದೇಶ ಕೊಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಜಾಯಿಂಟ್ ಚೀಫ್‌ಮಾರ್ಕೆಟಿಂಗ್ ಆಫೀಸರ್, ರೆಜಲ್ಯೂಷನ್ ಡೇಟೆಡ್. ೧೦ ಆಗಸ್ಟ್ ರಂದು ರೈತರಿಗೆ ಒದಗಿಸತಕ್ಕಂಥ ಎಲ್ಲಾ ಸೌಕರ್ಯವನ್ನು ಒದಗಿಸಿದ ಮೇಲೆ ರೈತರ ವ್ಯವಸಾಯೋತ್ಪನ್ನಗಳನ್ನು ಮಾರ್ಕೆಟ್ ಪ್ಲಾಟ್‌ಫಾರಂ ನಲ್ಲಿ ಹರಾಜು ಮಾಡುವುದಕ್ಕೆ ಆಜ್ಞೆ ಮಾಡಿದ್ದಾರೆ ಎಂದು ಹೇಳುತ್ತೀರಿ. ಆಜ್ಞೆಯಾದ ಮೂರು ತಿಂಗಳು ಒಳಗಾಗಿ ಸೌಕರ್ಯಗಳನ್ನು ಮಾಡಿಕೊಳ್ಳಬೇಕಂ ಎಂದು ಇದೆ. ಆದರೆ ಇದುವರೆಗೂ ಆ ಒಂದು ಸೌಕರ್ಯಗಳನ್ನು ಕೊಟ್ಟಿಲ್ಲ, ಇದರ ಬಗೆ ಸರ್ಕಾರೆದವರೇ ತಕ್ಷಣ ಕ್ರಮತೆಗೆದುಕೊಳ್ಳುತ್ತಾರೋ ?

ಶ್ರೀ ಎ ಶಂಕರ್ ಆಳ್ವ.—ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

## GRANT OF LOAN FOR COLLECTION OF PADDY

353 SRI H. D. DEVE GOWDA.—(Holenarasipur) Will the Minister of State for Food and Civil Supplies be pleased to state.—

(*a*) the amount of advance granted on behalf of Government to the Rice Mills in the State for collection of Paddy ;

(*b*) the details of the amount so advanced may be furnished (Yearwise break-up figures up-to date may please be furnished) ;

(*c*) whether the Paddy collected and kept in stock at present is on par with the amount so advanced ;

(*d*) whether the amount is recovered from them in case they have failed to collect the Paddy ?

SRI N. CHIKKEGOWDA.—(Minister of state for Animal Husnbadry)

On be half of SMT. E. E. VAZ.—(Minister of State forFood and Civil Supplies)

(*a*) Rs. 1,37,70,175,-65.

(*b*) The details are as follows :—

(1) 1958—Rs. 51,52,429-81
(2) 1959—Rs. 86,17,745-84

Total Rs. 1,37,70,175-65

(*c*) The paddy collected has been distributed as per law. There is no balance at present.

(*d*) Out of the advance granted during 1959, an amount of Rs. 3,45,345-36 is outstanding and is to be recovered.

ಶ್ರೀ ಎಚ್. ಡಿ. ದೇವೇಗೌಡ.—೧೯೫೯ರಲ್ಲಿ ಅಡ್ವಾನ್ಸ್ ಮಾಡಿದ ಹಣದ ಪೈಕಿ ಎಷ್ಟು ಬಾಕಿ ಇದೆ?

† ಶ್ರೀ ಎನ್. ಚಿಕ್ಕೇಗೌಡ.—೩ ಲಕ್ಷ ೬೨ ಸಾವಿರ ರೂಪಾಯಿ ಬಾಕಿ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಇದನ್ನು ವಸೂಲು ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ ?

ಶ್ರೀ ಎನ್. ಚಿಕ್ಕೇಗೌಡ.—ಇದರ ಬಗ್ಗೆ ಲೆಕ್ಕಗಳನ್ನು ಡೆಪ್ಯೂಟಿ ಕಮಿಷನರ್ ಅವರಿಗೆ ಕಳುಹಿಸಿ ಕೊಟ್ಟು, ಏನೇನು ನ್ಯೂನ್ಯತೆಗಳು ಇವೆಯೆಂದು ವೆರಿಫೈ ಮಾಡಿ ಕ್ರಮ ತೆಗೆದುಕೊಂಡು ವಸೂಲಿ ಮಾಡಿ ಡೆಪ್ಯೂಟಿ ಕಮಿಷನರ್ ಅವರಿಗೆ ಆದೇಶ ಕೊಟ್ಟಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—೧,೩೭,೭೦,೧೭೫ ರೂಪಾಯಿಗಳು ಭತ್ತದ ಸಂಗ್ರಹಣೆಗೆ ಮುಂಗಡವಾಗಿ ಕೊಟ್ಟು ಹಣ ಏನು ಇದೆ, ಭತ್ತವನ್ನು ಸಂಗ್ರಹಣೆ ಮಾಡಿದಮೇಲೆ ಅದನ್ನು ಮಾರಾಟ ಮಾಡಿ, ಸರ್ಕಾರದಿಂದ ತೆಗೆದುಕೊಂಡ ಹಣವನ್ನು ಕೊಡದೆ. ೩-೪-೫ವರ್ಷ ಇಟ್ಟುಕೊಂಡಿರತಕ್ಕ ಸನ್ನಿವೇಶ ಗಳಲ್ಲಿ ಅವರಿಂದ ಬಡ್ಡಿಯನು ಏನಾದರೂ ವಸೂಲು ಮಾಡಿದ್ದೀರಾ ? ಅವರ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದೀರಿ ? ಭತ್ತವನ್ನು ಮಾತಾಟ ಮಾಡಿದಮೇಲೆ, ಹಣವನ್ನು ಮಂರು ಪಾವತಿ ಮಾಡಿದ್ದರಿಂದ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎನ್. ಚಿಕ್ಕೇಗೌಡ.—ಹಣವನ್ನು ಮುಂಗಡವಾಗಿ ಕೊಡತಕ್ಕದ್ದು, ಭತ್ತವನ್ನು ಮಾರ್ಕೆಟ್ಟಿನಲ್ಲಿ ಕೊಂಡು, ಸರ್ಕಾರದ ಆದೇಶದ ಪ್ರಕಾರ ಭತ್ತವನ್ನು ವಿತರಣೆ ಮಾಡತಕ್ಕದ್ದು ಎಂದು ಇರತಕ್ಕ ಆಹಾರದ ನಿಯಂತ್ರಣದ ನೀತಿ. ಆದರಂತೆ ೧೯೫೯ರಲ್ಲಿ ಮಾತ್ರ ೩ಲಕ್ಷ ೪೫,೩೪೫-೩೬ಪೈಸೆ ಬಾಕಿ ಇದೆ. ಇದರಲ್ಲಿ ಜಿಲ್ಲಾವಾರುಗಳ ದೊಡ್ಡ ಪಟ್ಟಿಯೇ ಇದೆ, ನಾವು ಈಗಾಗಲೇ ಡೆಪ್ಯೂಟಿ ಕಮಿಷನರ್ ಅವರಿಗೆ ಇದರ ಬಗ್ಗೆ ತಿಳಿಸಿದ್ದೇವೆ. ಇದರ ಆಕೌಂಟ್ ಟ್ಯಾಲಿ ಆಗುತ್ತಾ ಇಲ್ಲ, ವೆರಿಫಿಕೇಷನ್ ಆಗುತ್ತಾ ಇದೆ,. ಕೆಲವು ಕೇಸುಗಳು ಕೋರ್ಟಿನಲ್ಲಿವೆ, ವೆರಿಫಿಕೇಷನ್ ಮಾಡಿ ವಸೂಲುಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—೧೯೫೯ನೇ ಇಸವಿಯಲ್ಲಿ ಕೊಟ್ಟರತಕ್ಕ ಹಣವನ್ನು ಇವತ್ತಿನವರೆಗೂ ವಸೂಲುಮಾಡಿಲ್ಲ. ಸಂಬಂಧಪಟ್ಟ ಅಧಿಕಾರಿಗಳ ಸ್ಥಾನ ಖಾಲಿಇತ್ತೇ ಇಲ್ಲದೆಹೋದರೆ ಇದಕ್ಕೆ ಪ್ರಬಲ ಕಾರಣವೇನು ?

ಶ್ರೀ ಎನ್. ಚಿಕ್ಕೇಗೌಡ.—ತಹಸೀಲ್ದಾರರುಗಳು, ಡೆಪ್ಯೂಟಿ ಕಮಿಷನರ್‌ಗಳು ಮತ್ತು ಆಹಾರದ ಇಲಾಖೆಯ ಅಕೌಂಟ್ಸ್ ಅನ್ನು ವೆರಿಫೈ ಮಾಡಿ ಈಗಾಗಲೇ ಕೆಲವು ಕೇಸುಗಳು ಕೋರ್ಟಿನಲ್ಲಿವೇ ಎಂದು ಈಗಾಗಲೇ ಹೇಳಿದ್ದೇನೆ. ಅನೇಕ ಕೇಸುಗಳ ವಿಚಾರಣೆಯಾಗುತ್ತಾ ಇದೆ, ಡೆಪ್ಯೂಟಿ ಕಮಿಷನರ್ ಅವರಿಗೆ ಒತ್ತಾಯಪೂರ್ವಕವಾಗಿ ವಸೂಲಂ ಮಾಡುವುದಕ್ಕೆ ಕ್ರಮಂ ತೆಗೆದುಕೊಳ್ಳಬೇಕಂ ಎಂದಂ ಹೇಳಿದ್ದೇವೆ. ಒಂದೆರಡು ಕೇಸುಗಳನ್ನು ಹೇಳುವುದಾದರೆ in some cases amount proposed for adjustment in the Bills: some claims are under Verification in theCAO's office and some bills are pending with the concerned Tahsildars. ತಹಸೀಲ್ದಾರ್ ಮಂತ್ತು ಡೆಪ್ಯೂಟಿ ಕಮಿಷನರ್ ಅವರ ಲೆವೆಲ್‌ನಲ್ಲಿ ಕೆಲವು ಇವೆ, ಅವುಗಳನ್ನು ಪರಿಶೀಲ ನೆಮಾಡಿ ಸೂಕ್ತ ಕ್ರಮಂ ತೆಗೆದುಕೊಳ್ಳಬೇಕೆಂದಂ ಹೇಳಿದ್ದೇವೆ.

ಶ್ರೀ ಹಂಜಿ ಶಿವಣ್ಣ—ಭತ್ತವನ್ನು ಸಂಗ್ರಹಣೆ ಮಾಡಿ ಲಾಭಮಾಡಿಉಳಿದಿರತಕ್ಕ ಹಣ ಭತ್ತವನ್ನೂ ಕೊಟ್ಟಿಕೊಳ್ಳದೆ ಇರತಕ್ಕ ಹಣವೆ ? ಸರ್ಕಾರದವರು ರೈತರು ಲೆವಿ ಭತ್ತವನ್ನು ಮೇಲೆ, ರೈತನ ಹತ್ತಿರ ೪೦ಕ್ವಿಂಟಾಲ್‌ಗಳಿಗಿಂತ ಹೆಚಾ ಗೆ ಇದ್ದುದಕ್ಕೂ ಅಧಿಕಾರಿಗಳು ಹೋಗಿ ಕಾದೆಯಿಪ್ರಕಾರ ಲೆವಿ ಕೊಡಲಿಲ್ಲ ಎಂದು ಭತ್ತವನ್ನು ವಸೂಲು ಮಾಡುವುದನ್ನು ತಪ್ಪಿಸಲಿಕ್ಕೆಪ್ರಯತ್ನಪಡುತ್ತೀರಾ?

ಶ್ರೀ ಎನ್. ಚಿಕ್ಕೇಗೌಡ.—ಕೊಡಬೇಕಾದಂಥ ಲೆವಿ ಕೊಟ್ಟಮೇಲೆ ಯಾವ ರೈತರ ಮೇಲೆ ಕಾನೂನು ಖಟ್ಲೆ ವಿಧಿಸುವ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಿಲ್ಲ ಆರೀತಿ ಮಾಡಕೂಡದು ಎಂದು ಆದೇಶ ಕೊಟ್ಟಿದ್ದೇವೆ. ಲೆವಿಪ್ರಕ್ಯೂರ್‌ಮೆಂಟ್ ಆರ್ಡರ್ ಪ್ರಕಾರ ಹಣ ಮುಂಗಡವಾಗಿ ಕೊಟ್ಟಿದ್ದೇವೆ. ತಾವು ಹೇಳಿದ ಪ್ರಕಾರ ವಿತರಣೆ ಮಾಡುವ ವಿಷಯದಲ್ಲಿ ನಾವು ಏನು ಹಣವನ್ನು ಕೊಟ್ಟಿದ್ದೇವೋ, ಅದಕ್ಕೆ ಭತ್ತವನ್ನು ವಸೂಲಿ ಮಾಡಿ ನಮ್ಮ ಪರವಾಗಿ ಇಟ್ಟುಕೊಂಡಿದ್ದು ನಾವು ಹೇಳಿದ ಕಾಲದಲ್ಲಿ ವಿತರಣೆ ಮಾಡಬೇಕು. ೧೯೫೮ರಲ್ಲಿ ಒಂದು ಕಾಸೂ ಬಾಕಿ ಇಲ್ಲ, ೧೯೫೯ರಲ್ಲಿ ಬಾಕಿ ಇದೆ. ಜಿಲ್ಲಾವಾರು ರೈಸ್ ಮಿಲ್ಸ್‌ಗಳ ಒಂದು ದೊಡ್ಡ ಪಟ್ಟಿಯೇ ಇದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ್.—ರೈತರಿಂದ ಭತ್ತ ಸಂಗ್ರಹಣೆ ಮಾಡಿ ಅಕ್ಕಿ ಮಾಡಿ ಮಾರಾಂ ಮಾಡುತ್ತಾರೆ. ಸಂಗ್ರಹಣೆ ಮಾಡಬೇಕಾದರೆ ಕೊಡಬೇಕಾದ ಧಾರಣೆಗೂ ಅಕ್ಕಿಯನ್ನು ಮಾರಾಟ ಮಾಡುವಾಗ ಕೊಡುವ ಧಾರಣೆಗೂ ವ್ಯತ್ಯಾಸವಿರುತ್ತದೆ. ಇದರಿಂದ ಬಂದಂಥ ಲಾಭವನ್ನು ಯಾರು ಲೆವಿ ಕೊಡ ಶ್ತಾರೋ ಅವರಿಗೆ ಈ ಹಣವನ್ನು ಕೊಡತಕ್ಕ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೆಗೌಡ.—ಈ ಪ್ರಶ್ನೆಯಲ್ಲಿ, ತಾವು ಕೇಳಿದಂಥ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಕೆ. ಯಂಕಟಪ್ಪ.—ತಾವು ಏನು ಭತ್ತವನ್ನು ಶೇಖರಣೆ ಮಾಡುತ್ತೀರೋ ಅದನ್ನು ಸರ್ಕಾರದವರು ಎಷ್ಟು ದಿವಸದಲ್ಲಿ ಗಿರಣಿಗಳಿಂದ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ ? ತಮ್ಮ ವಶಕ್ಕೆ ತೆಗೆದು ಕೊಂಡ ಮೇಲೆ ಅದನ್ನು ನಿಮ್ಮ ಆಹಾರ ನಿಯಂತ್ರಣ ಕಾಯಿದೆ ಪ್ರಕಾರ ವಿತರಣೆ ಮಾಡುತ್ತೀರಾ ?

(No Answer)

9-30 A.M.

ಶ್ರೀ ಕೆ. ಮಾದೇಗೌಡ.—ಬಾಕಿದಾರರ ಮೇಲೆ ಕೋರ್ಟಿಗೆ ಕೇಸ್ ದಾಖಲು ಮಾಡಿದ್ದೇವೆ ಎಂದು ಹೇಳಿದ್ದೀರಿ. ಕೇಸು ದಾಖಲು ಮಾಡಿದ್ದರೆ ಎಷ್ಟು ಜನದ ಮೇಲೆ ತಾವು ಅಟ್ಯಾಚ್‌ಮೆಂಟ್ ತೆಗೆದು ಕೊಂಡಿದ್ದಾರೆ ಅಥವಾ ಈ ಮಧ್ಯೆ ಅವರ ಆಸ್ತಿಯನ್ನು ಬೇರೆಯವರಿಗೆ ವರ್ಗಾವಣೆ ಮಾಡಿದರೆ ಅವರಿಂದ ಬಾಕಿ ಯಾವ ರೀತಿಯಲ್ಲಿ ತಾವು ವಸಲೂ ಮಾಡುತ್ತೀರಿ ?

ಶ್ರೀ ಎನ್. ಚಿಕ್ಕೇಗೌಡ.—ನಾನು ಈಗಾಗಲೇ ಹೇಳಿದ ಹಾಗೆ ಹೈಕೋರ್ಟು, ಸುಪ್ರೀಂ ಕೋರ್ಟುನಲ್ಲಿ ಕೇಸುಗಳು ಇವೆ. ಇವುಗಳ ಬಗ್ಗೆ ಪ್ರೊಸೀಡಿಂಗ್ಸ್ ಎಲ್ಲಾ ತೆಗೆದುಕೊಂಡು ಅವು ಹಂತ, ಹಂತಗಳಲ್ಲಿ ಇವೆ, ಯಾವುದಾದರೂ ಒಂದು ನಿರ್ದಿಷ್ಟವಾದ ಕೇಸಿನಲ್ಲಿ ಕೇಳಿದರೆ ಹೇಳುತ್ತೇನೆ.

## N.R.W.S. SCHEME IN ARSIKERE TALUK

363. SRI H. S. SIDDAPPA (Arsikere).—

Will the Minister for Community Development and Social Welfare be pleased to state :—

(*a*) the names of villages where protected tap water is provided under N.R.W.S. in Arsikere taluk ;

(*b*) the names of villages in Arsikere taluk for which the schemes are under preparation and pending sanction ;